# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯಕೇಂದ್ರಕಾರ್ಯಾಲಯ, #39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.in


ಸಂಖ್ಯೆ:ಎಸ್‌ಹೆಚ್‌ಕ್ಯೂ/ 339 /2026–27 ದಿನಾಂಕ:03.06.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಯವರುಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ,
ಕರ್ನಾಟಕ.

**ಮಾನ್ಯರೆ,**

ವಿಷಯ:- ವಿಶ್ವ ಪರಿಸರ ದಿನಾಚರಣೆ-2026 ಮತ್ತು ಅಂತರರಾಷ್ಟ್ರೀಯ ಯೋಗ ದಿನಾಚರಣೆ-2026 ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:05.06.2026 ರಂದು ವಿಶ್ವ ಪರಿಸರ ದಿನಾಚರಣೆ ಮತ್ತು ದಿನಾಂಕ:21.06.2026 ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಎಲ್ಲಾ ಜಿಲ್ಲಾ / ಸ್ಥಳೀಯ ಹಾಗೂ ದಳ ಹಂತಗಳಲ್ಲಿ ಈ ಕೆಳಗೆ ತಿಳಿಸಿರುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸುವಂತೆ ಕೋರಲಾಗಿದೆ.

1. **ವಿಶ್ವ ಪರಿಸರ ದಿನಾಚರಣೆ**: ವಿಶ್ವ ಪರಿಸರ ದಿನಾಚರಣೆಯನ್ನು **ಜೂನ್ 5ರಂದು** ರಾಜ್ಯ ಸಂಸ್ಥೆ ನೀಡಿರುವ ಚಟುವಟಿಕೆ ಪ್ಯಾಕ್ ಪ್ರಕಾರ ಅರ್ಥಪೂರ್ಣವಾಗಿ ಆಚರಿಸುವುದು. **ಅರಣ್ಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**ಯವರು ಆಯೋಜಿಸುವ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮತ್ತು ಅವರ ಸಹಕಾರದೊಂದಿಗೆ ಎಲ್ಲಾ ಜಿಲ್ಲಾ/ ತಾಲ್ಲೂಕು ಹಾಗೂ ದಳ ಹಂತಗಳಲ್ಲಿ ಈ ವರ್ಷದ **"ಪ್ರಕೃತಿಯಿಂದ ಸ್ಫೂರ್ತಿ. ಹವಾಮಾನಕ್ಕಾಗಿ. ನಮ್ಮ ಭವಿಷ್ಯಕ್ಕಾಗಿ(Inspired by Nature. For Climate. For Future.)"** ಎಂಬ ಧ್ಯೇಯವಾಕ್ಯದಂತೆ ಭವಿಷ್ಯದ ಪೀಳಿಗೆಗಾಗಿ ಸುಸ್ಥಿರತೆ, ಹವಮಾನ ಕ್ರಮ ಹಾಗೂ ಪರಿಸರದ ವ್ಯವಸ್ಥೆಗಳನ್ನು ರಕ್ಷಿಸುವ ಕಾರ್ಯಕ್ಕೆ ಎಲ್ಲರೂ ಕೈಗೂಡಿಸೋಣ. ಜೂನ್ ಮಾಹೆಯಲ್ಲಿಯ 4 ಶನಿವಾರ ಅಥವಾ 4 ಭಾನುವಾರಗಳಂದು ಚಟುವಟಿಕೆ ಪ್ಯಾಕ್‌ನಂತೆ ಭೂಮಿ, ನೀರು, ವಾಯು ಮತ್ತು ಸೂರ್ಯ ಎಂಬ ಧ್ಯೇಯದೊಂದಿಗೆ ವರ್ಚ್ಯುಯಲ್ ಶಿಬಿರಾಗ್ನಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಪರಿಸರ ರಕ್ಷಣೆಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಾದ ಜೆಣ್ಣರವನ ದರ್ಶನ, ಸಸಿ ನೆಟ್ಟು ಪೋಷಿಸುವುದು, ಬೀಜದುಂಡೆ ತಯಾರಿಸುವುದು, ಸಾವಯವ ಕೃಷಿಯ ಬಗ್ಗೆ ತಿಳುವಳಿಕೆ, ಪರಿಸರ ಮಾಲಿನ್ಯ, ಜಲಮಾಲಿನ್ಯ, ವಾಯುಮಾಲಿನ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಾಗೃತಿ, ಮಳೆನೀರುಕೊಯ್ಲು, ಸೌರಶಕ್ತಿ ಮತ್ತು ಅದರ ಪ್ರಯೋಜನಗಳು ಹಾಗೂ ಇತ್ಯಾದಿಗಳನ್ನು ದಳ ಹಂತದಲ್ಲಿ ನಡೆಸುವುದರ ಮುಖಾಂತರ ಜೂನ್ 2026 ಮಾಹೆಯಾದ್ಯಂತ ಪರಿಸರ ದಿನಾಚರಣೆಯನ್ನು ಯಶಸ್ವಿಗೊಳಿಸೋಣ. **ನಿರ್ವಹಿಸಿದ ಚಟುವಟಿಕೆಗಳ ಭಾವಚಿತ್ರ ಹಾಗೂ ವಿವರವನ್ನು ರಾಜ್ಯ ಸಂಸ್ಥೆಯಿಂದ ನೀಡಲಾದ ಈ ಕೆಳಕಂಡ ಲಿಂಕ್‌ನಲ್ಲಿ ಅಪ್ಲೋಡ್ ಮಾಡುವುದು ಮತ್ತು ಅಪ್ಲೋಡ್ ಮಾಡಿದವರಿಗೆ ಇ- ಪ್ರಮಾಣಪತ್ರವನ್ನು ನೀಡಲಾಗುವುದು. ಸದರಿ ಚಟುವಟಿಕೆಗಳ ಭಾವಚಿತ್ರಗಳನ್ನು ಹ್ಯಾಶ್‌ಟ್ಯಾಗ್ ಬಳಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು.**

   **ಅಪ್ಲೋಡ್ ಮಾಡಬೇಕಾದ ಲಿಂಕ್**:- https://zfrmz.in/H8zqTMTHPa8EhJ6V8aZ3

2. **ಯೋಗ ದಿನಾಚರಣೆ** : ದಿನಾಂಕ: 21-06-2026 ರಂದಿನ ವಿಶ್ವ ಯೋಗದಿನಾಚರಣೆಯ ಅಂಗವಾಗಿ ದಿನಾಂಕ:11.06.2026 ರಿಂದ 21.06.2026 ರವರೆಗೆ ದಳ ಹಂತದಿಂದ ಜಿಲ್ಲಾ ಹಂತದ ವರೆಗೆ ಬೆಳಗ್ಗಿನ ಅವಧಿಯಲ್ಲಿ ಸಾಮೂಹಿಕ ಯೋಗ, ಪ್ರಾಣಾಯಾಮ, ಧ್ಯಾನ ಹಾಗೂ ಇತರೆ ವಿವಿಧ ಯೋಗ ತರಬೇತಿಯನ್ನು ನೀಡುವುದು ಹಾಗೂ ತಮ್ಮ ಜಿಲ್ಲೆಯ ಆಯುಷ್ ಇಲಾಖೆಯ ಸಹಯೋಗದೊಂದಿಗೆ ಎಲ್ಲಾ ಮಕ್ಕಳು ದಿನನಿತ್ಯ ಅಭ್ಯಾಸಿಸಿ ಮಾನಸಿಕ ಮತ್ತು ದೈಹಿಕವಾಗಿ ಸದೃಢರಾಗಲು ಯೋಗಾಭ್ಯಾಸವನ್ನು ನಿರಂತರವಾಗಿ ನಡೆಸಲು ಪ್ರೋತ್ಸಾಹಿಸುವುದು. ಸಂಘಟಿಸಿರುವ ಯೋಗ ದಿನಾಚರಣೆಯ ವರದಿ ಮತ್ತು ಭಾವಚಿತ್ರಗಳನ್ನು ಹ್ಯಾಶ್‌ಟ್ಯಾಗ್ ಬಳಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು ಹಾಗೂ ರಾಜ್ಯ ಸಂಸ್ಥೆಗೆ ಕಳುಹಿಸುವುದು.

ಈ ಮೇಲಿನಂತೆ ವಿಶ್ವ ಪರಿಸರ ದಿನಾಚರಣೆ ಹಾಗೂ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮಗಳು, ಚಟುವಟಿಕೆಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸುವಲ್ಲಿ ದಳ ನಾಯಕರುಗಳು, ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಮುಂಚಿತವಾಗಿ ಯೋಜಿಸಿ, ಎಲ್ಲಾ ಕಾರ್ಯಕ್ರಮಗಳನ್ನು ವಿಶೇಷವಾಗಿ ಮತ್ತು ವಿಶಿಷ್ಟವಾಗಿ ಸಂಘಟಿಸಿ ಯಶಸ್ವಿಗೊಳಿಸಲು ಕೋರಲಾಗಿದೆ. ಆಯಾಯ ಜಿಲ್ಲೆಯಲ್ಲಿರುವ ಸಂಘಟಕರುಗಳು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಕ್ರಮ ಕೈಗೊಳ್ಳಲು ಸೂಚಿಸಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಮಾಹಿತಿಗಾಗಿ:**

1. ರಾಜ್ಯ ಆಯುಕ್ತರು(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
2. ರಾಜ್ಯ ಆಯುಕ್ತರು(ವ.ಸಂ.), ಭಾ.ಸ್ಕೌ&ಗೈ, ಕರ್ನಾಟಕ
3. ರಾಜ್ಯ ಜಂಟಿ ಕಾರ್ಯದರ್ಶಿ(ಸ್ಕೌ/ಗೈ), ಭಾ.ಸ್ಕೌ&ಗೈ, ಕರ್ನಾಟಕ
4. ಎಎಸ್ಒಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳ ಸೂಕ್ತ ಕ್ರಮಕ್ಕಾಗಿ
5. ಕಛೇರಿ ಪ್ರತಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ವಿಶ್ವ ಪರಿಸರ ದಿನಾಚರಣೆ

## ಚಟುವಟಿಕೆ ಪ್ಯಾಕ್







ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರಿಗೆ ಚಟುವಟಿಕೆ ಪ್ಯಾಕ್‌ಗಳನ್ನು ನೀಡಲಾಗಿದೆ. ಜೂನ್ ತಿಂಗಳಲ್ಲಿನ ಶನಿವಾರ/ಭಾನುವಾರಗಳಲ್ಲಿ ಕೆಳಗಿನ ಚಟುವಟಿಕೆಗಳಲ್ಲಿ ಭಾಗವಹಿಸಿ ಹಾಗೂ ವಾರಾಂತ್ಯದಲ್ಲಿ ಸ್ಥಳೀಯ ಸಂಸ್ಥೆ/ಜಿಲ್ಲಾ ಸಂಸ್ಥೆ ನಡೆಸುವ ವರ್ಚುವಲ್ ಶಿಬಿರ ಕಾರ್ಯಕ್ರಮದಲ್ಲಿ ವರದಿಯನ್ನು ಸಲ್ಲಿಸಬೇಕು.

### 1ನೇ ವಾರ : ಧ್ಯೇಯ – ಭೂಮಿ

1. ನಿಮ್ಮ ಮನೆಯ ಸುತ್ತಮುತ್ತಲಿನ ಜಾಗದಲ್ಲಿ ಒಂದು ಅಥವಾ ಹೆಚ್ಚು ಸಸಿಗಳನ್ನು ನೆಡುವುದು.
2. ತಮ್ಮ ದಳಮಟ್ಟದಲ್ಲಿ ಅಥವಾ ಸ್ಥಳೀಯ ಸಂಸ್ಥೆ ಮಟ್ಟದಲ್ಲಿ ನಡೆಯುವ ಬೀಜದುಂಡೆ ಸಿದ್ಧತೆಯಲ್ಲಿ ಪಾಲ್ಗೊಳ್ಳುವುದು.
3. ಪರಿಸರ ಜಾಗೃತಿಗಾಗಿ ಜಾಥಾ/ಸೈಕಲ್ ಜಾಥಾಗಳಲ್ಲಿ ಭಾಗವಹಿಸುವುದು.
4. ಪರಿಸರ ವಿಷಯವಾಗಿ ಪ್ರಬಂಧ ಸ್ಪರ್ಧೆ / ಪೋಸ್ಟರ್ ತಯಾರಿಕಾ ಸ್ಪರ್ಧೆ / ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸುವುದು.
5. ಶಾಲೆ/ಕಿಚನ್ ಗಾರ್ಡನ್/ಟೆರಸ್ ಗಾರ್ಡನ್‌ನಲ್ಲಿ ಹಣ್ಣು, ಹೂವು, ತರಕಾರಿಗಳನ್ನು ಬೆಳೆಸುವುದು.
6. Earth Tribe ಗೆ ಸೇರಿಕೊಳ್ಳಿ ಹಾಗೂ "Champions for Nature" ಸವಾಲಿನಲ್ಲಿ ಭಾಗವಹಿಸಿ:

### 2ನೇ ವಾರ : ಧ್ಯೇಯ – ನೀರು

1. ಜಲಮಾಲಿನ್ಯ ತಡೆ ಕುರಿತು ಜಾಗೃತಿ ಮೂಡಿಸುವುದು.
2. ಮಳೆನೀರು ಕೊಯ್ಲಿನ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಿ ಹಾಗೂ ನೀರನ್ನು ಮಿತವಾಗಿ ಬಳಸುವುದು.
3. ಕೊಳ/ಸರೋವರ/ಸಮುದ್ರ ತೀರಗಳಲ್ಲಿ ಸ್ವಚ್ಛತಾ ಸೇವೆಯಲ್ಲಿ ಸ್ವಯಂಸೇವಕರಾಗಿ ಪಾಲ್ಗೊಳ್ಳುವುದು.
4. "Plastic Tide Turners Challenge" ಬ್ಯಾಡ್ಜ್ ಕಾರ್ಯದಲ್ಲಿ ಭಾಗವಹಿಸುವುದು.
5. ನೀರಿನಡಿಯ ಜೀವಜಗತ್ತನ್ನು ರಕ್ಷಿಸಲು ಪ್ರೇರಣಾದಾಯಕ ವಿಡಿಯೋ ತಯಾರಿಸುವುದು.



### 3ನೇ ವಾರ : ಧ್ಯೇಯ – ವಾಯು

1. ವಾಯುಮಾಲಿನ್ಯ ತಡೆ ಕುರಿತು ಜಾಗೃತಿ ಮೂಡಿಸುವುದು.
2. ಏಕಬಳಕೆ ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸಿ, ಅದರ ಹಾನಿಕಾರಕ ಪರಿಣಾಮಗಳ ಕುರಿತು ಚಾರ್ಟ್ ಸಿದ್ಧಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದು.
3. ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆಯನ್ನು ನಿಲ್ಲಿಸಿ, ಬಟ್ಟೆ ಚೀಲಗಳನ್ನು ತಯಾರಿಸಿ ಬಳಸುವುದು.
4. ಪತ್ರಿಕೆಗಳಿಂದ ಪೇಪರ್ ಬ್ಯಾಗ್ ತಯಾರಿಸಿ ಸ್ಥಳೀಯ ಅಂಗಡಿಗಳಿಗೆ ವಿತರಿಸುವುದು.ಸಮುದಾಯ ಸೇವಾ ಕಾರ್ಯಗಳಲ್ಲಿ ಭಾಗವಹಿಸುವುದು.





### 4ನೇ ವಾರ : ಧ್ಯೇಯ – ಸೂರ್ಯ

1.ಸೌರಶಕ್ತಿ ಮತ್ತು ಅದರ ಪ್ರಯೋಜನಗಳ ಬಗ್ಗೆ ತಿಳಿದುಕೊಳ್ಳುವುದು.
2.ಕೆಳಗಿನ ಯಾವುದಾದರೂ ಒಂದು ಸೌರ ಮಾದರಿಯನ್ನು ಪ್ರದರ್ಶಿಸುವುದು:
oಸೌರ ಕಲೆ , ಸೌರ ಅಡುಗೆಪಾತ್ರೆ , ಸೌರ ಕಾರ್ , ಸೌರ ನೀರಿನ ಕಾರಂಜಿ , ಸೌರ ಫಲಕ ಕಲೆ, ಸೌರ ದೀಪ, ಸೌರ ಆಟಿಕೆಗಳು , ಸೌರಶಕ್ತಿ ಪ್ರದರ್ಶನ
3.ಕೆಳಗಿನ ಪ್ರಾವೀಣ್ಯತಾ ಪದಕಗಳಿಗಾಗಿ ಕಾರ್ಯ ಮಾಡುವುದು:
o ಪರಿಸರತಜ್ಞ , ವಿಶ್ವ ಸಂರಕ್ಷಣೆ , ಅರಣ್ಯ ತಜ್ಞ , ರೈತ , ನೈರ್ಮಲ್ಯ ಪ್ರವರ್ತಕ , ಸೌರಶಕ್ತಿ
4.ದೃಶ್ಯ ಚಟುವಟಿಕೆ:
ನಾವು ಬಳಸುವ ಶಕ್ತಿ ಎಷ್ಟು ಸ್ವಚ್ಛವಾಗಿದೆ? ನವೀಕರಿಸಬಹುದಾದ ಶಕ್ತಿಯ ವಿವಿಧ ಮೂಲಗಳ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಸ್ಕೌಟಿಂಗ್ ಕಾರ್ಯಕ್ರಮಗಳಲ್ಲಿ ಅವುಗಳ ಬಳಕೆಯನ್ನು ಅನ್ವೇಷಿಸುವುದು.
5. "Scouts Go Solar" ಸವಾಲಿನಲ್ಲಿ ಭಾಗವಹಿಸುವುದು:

https://earthtribe.scout.org/challenges/scouts-go-solar



"ನಮ್ಮ ಭೂಮಿಯ ಭವಿಷ್ಯ ನಮ್ಮ ಕೈಯಲ್ಲಿದೆ ಇಂದೇ ಕ್ರಿಯಾಶೀಲರಾಗೋಣ"

ಈ ಕೆಳಕಂಡ ಲಿಂಕ್ ಅಥವಾ ಕ್ಯೂ ಆರ್ ಕೋಡ್ ಮೂಲಕ ವರದಿ ಸಲ್ಲಿಸುವುದು

https://zfrmz.in/H8zqTMTHPa8EhJ6V8aZ3

Bsgkarnataka www.bsgkarnataka.in

'ಪರಿಸರ ರಕ್ಷಣೆ ನಮ್ಮ ಪ್ರತಿಜ್ಞೆ'



THE BHARAT SCOUTS AND GUIDES, KARNATAKA

# WORLD ENVIRONMENT DAY

## ACTIVITY PACK FOR A GREENER TOMORROW





**For Cubs, Bulbuls, Scouts, Guides, Rovers, Rangers & Unit Leaders**

Let's join hands to protect our planet! Participate in the activities listed below every Saturday/Sunday during the month of **June**. Submit your report in the Virtual Camp Programme conducted by your Local Association / District Association at the end of each week.

## 1 WEEK 1 : THEME – EARTH

1. Plant one or more saplings in and around your home.
2. Participate in seed ball making at Unit level or Local Association level.
3. Take part in awareness rally / cycle rally for environment.
4. Participate in essay competition / poster making competition / drawing competition on environmental themes.
5. Grow fruit, flower and vegetable plants in school garden / kitchen garden / terrace garden.
6. Join Earth Tribe and take part in "Champions for Nature" challenge.

earth tribe https://earthtribe.scout.org/

## 2 WEEK 2 : THEME – WATER

1. Create awareness on water pollution.
2. Create awareness about rainwater harvesting and the importance of using water wisely.
3. Participate in cleanliness drive at ponds / lakes / rivers / seashores.
4. Take part in "Plastic Tide Turners Challenge" badge work.
5. Make an inspiring video on protecting underwater life.



PLASTIC TIDE TURNERS CHALLENGE

## 3 WEEK 3 : THEME – AIR

1. Create awareness about air pollution.
2. Say NO to single-use plastic. Prepare a chart on its harmful effects and share on social media.
3. Stop using plastic bags. Make and use cloth bags.
4. Make paper bags from newspapers and distribute them to local shops.
5. Take part in community service activities.




## 4 WEEK 4 : THEME – SOLAR

1. Learn about solar energy and its benefits.
2. Prepare and display any one solar model:




3. Work for any of the following proficiency badges:
   - Environmentalist
   - World Conservation
   - Forester
   - Gardener
   - Swachhata Prawartak
   - Solar Energy
4. Visual Activity: How clean is the energy we use? Explore different sources of renewable energy and their use in Scouting activities.
5. Take part in "Scouts Go Solar" challenge.

https://earthtribe.scout.org/challenges/scouts-go-solar

SCOUTS GO SOLAR

**Small actions today, big impact tomorrow – BE THE CHANGE!**

SAVE EARTH · SAVE WATER · CLEAN AIR · USE SOLAR · SAVE LIFE

"Our Earth, Our Future – Let's Protect It"